# ಪ್ರಲಾಪಗಳು

## ಮುನ್ನುಡಿ

ಕ್ರಿಸ್ತಪೂರ್ವ 586ರಲ್ಲಿ ಜೆರುಸಲೇಮ್ ಪಟ್ಟಣವು ನೆಲಸಮವಾಯಿತು. ಯೆಹೂದ ಜನತೆ ನಾಡನ್ನು ಬಿಟ್ಟು ವಲಸೆ ಹೋಗಬೇಕಾಯಿತು. ಈ ದುಃಖಕರವಾದ ಘಟನೆಯನ್ನು ಕುರಿತು ಐದು ಶೋಕಗೀತೆಗಳನ್ನು ಒಂದಾಗಿ ಪೋಣಿಸಿ ಇದಕ್ಕೆ "ಪ್ರಲಾಪಗಳು" ಎಂದು ಹೆಸರಿಸಲಾಗಿದೆ. ಇವುಗಳಲ್ಲಿ ಶೋಕಭಾವನೆಗಳು ತುಂಬಿವೆಯಾದರೂ ದೇವರಲ್ಲಿ ನಂಬಿಕೆ ಹಾಗೂ ಭವಿಷ್ಯದಲ್ಲಿ ಭರವಸೆ ಇರುವ ಗುಣಗಳು ಎದ್ದು ಕಾಣಿಸಿಕೊಳ್ಳುತ್ತವೆ.

ವಾರ್ಷಿಕ ಉಪವಾಸ ದಿನಗಳಲ್ಲೂ ಶೋಕ ಸಂದರ್ಭಗಳಲ್ಲೂ ಈ ಪ್ರಲಾಪನೆಗಳನ್ನು ಪಠಿಸುವ ವಾಡಿಕೆ ಯೆಹೂದ್ಯರಲ್ಲಿ ಹಾಗೂ ಕ್ರೈಸ್ತರಲ್ಲಿ ಇಂದಿಗೂ ಉಂಟು.

## ಪರಿವಿಡಿ


| | | | | |
|---|---|---|---|---|
| ಜೆರುಸಲೇಮಿನ ದುಃಖ | – | 1.1 | – | 22 |
| ಜೆರುಸಲೇಮಿಗೆ ದಂಡನೆ | – | 2.1 | – | 22 |
| ದುಃಖ, ದಂಡನೆ ಮತ್ತು ಭರವಸೆ | – | 3.1 | – | 66 |
| ಜಜ್ಜರಿತವಾದ ಜೆರುಸಲೇಮ್ | – | 4.1 | – | 22 |
| ಕರುಣೆಗಾಗಿ ಪ್ರಾರ್ಥನೆ | – | 5.1 | – | 22 |


### ಮೊದಲನೆಯ ಶೋಕಗೀತೆ

#### ಸಿಯೋನಿನ ದುಃಖದುಗುಡ

**1** ಅಯ್ಯೋ, ಅಂದು ಜನಭರಿತವಾಗಿದ್ದ ನಗರಿ
ಇಂದು ಒಂಟಿಯಾಗಿ ಕುಳಿತುಬಿಟ್ಟಳಲ್ಲಾ !
ರಾಷ್ಟ್ರಗಳಲ್ಲೆಲ್ಲಾ ಅತಿ ಶ್ರೇಷ್ಠಳಾಗಿದ್ದವಳು
ವಿಧವೆ ಆಗಿಬಿಟ್ಟಳಲ್ಲಾ !
ಪ್ರಾಂತ್ಯಗಳಲ್ಲೆಲ್ಲಾ ಬಹಳ
ಪ್ರವೀಣಳಾಗಿದ್ದವಳು
ದಾಸಿಯಂತೆ ಆಗಿಬಿಟ್ಟಿರುವಳಲ್ಲಾ !

2 ಇರುಳೆಲ್ಲ ಅತ್ತಳು ಬಿಕ್ಕಿಬಿಕ್ಕಿ
ಕೆನ್ನೆ ಮೇಲೆ ನೋಡಿ, ಕಣ್ಣೀರ ಕೋಡಿ !
ಆಕೆಯ ಹಲವಾರು ಪ್ರಿಯರಲ್ಲಿ
ಸಂತೈಸುವವರೇ ಇಲ್ಲ
ಮಿತ್ರರಾಗಿದ್ದವರೇ ದ್ರೋಹವೆಸಗಿ
ಶತ್ರುಗಳಾಗಿರುವರಲ್ಲಾ !

3 ಘೋರಸೇವೆ ಶ್ರಮೆಗಳಿಂದ ತಪ್ಪಿಸಿಕೊಳ್ಳಲಿಕೆ

ವಲಸೆಹೋಗಿರುವಳಲ್ಲಾ 'ಯೆಹೂದಿ'
ಎಂಬಾಕೆ !
ಮ್ಲೇಚ್ಛರ ಮಧ್ಯೆ ವಾಸಮಾಡುತ್ತಿರುವಳಲ್ಲಾ
ನೆಮ್ಮದಿಯಿಲ್ಲದೆ
ಹಿಮ್ಮೆಟ್ಟಿ ಹಿಡಿದರು ಹಿಂಸಕರೆಲ್ಲಾ ಆಕೆ
ಇಕ್ಕಟ್ಟಿಗೆ ಸಿಕ್ಕಿರುವಾಗಲೆ !

4 ಬಿಕೋ ಎನ್ನುತ್ತಿವೆ ಸಿಯೋನಿಗೆ ತೆರಳುವ
ಮಾರ್ಗಗಳು
ಮಹೋತ್ಸವಕ್ಕೆ ಇನ್ನು ಬರುತ್ತಿಲ್ಲ
ಯಾತ್ರಿಕರಾರು
ಪಾಳುಬಿದ್ದಿವೆ ಅದರ ಬಾಗಿಲುಗಳು
ನಿಟ್ಟುಸಿರಿಡುತ್ತಿರುವರು ಅದರ ಯಾಜಕರು
ವ್ಯಥೆಪಡುತ್ತಿರುವರು ಅದರ ಯುವತಿಯರು
ನಗರಕ್ಕೆ ನಗರವೇ ದುಃಖದಲ್ಲಿ
ಮುಳುಗಿರುವುದು.

5 ಅದರ ಅಗಣಿತ ದ್ರೋಹಗಳಿಗಾಗಿ
ಸರ್ವೇಶ್ವರ ಮಾಡಿದನದನ್ನು ದುಃಖಕ್ಕೆ
ಈಡಾಗಿ,
ಅದರ ವಿರೋಧಿಯೇ ಅದಕ್ಕೀಗ ಅಧಿಪತಿ !
ಅದರ ಶತ್ರುಗಳಿಗೋ ಸುಖಸಮೃದ್ಧಿ !
ಅದರ ಹಸುಳೆಗಳೂ ಸೆರೆಹೋಗಿವೆ ವೈರಿಯ
ವಶವಾಗಿ !

6 ಕಳೆದು ಹೋಗಿದೆಯಲ್ಲಾ ಸಿಯೋನ್ ನಗರಿಯ
ವೈಭವವೆಲ್ಲಾ !
ಮೇವಿಲ್ಲದೆ ಬಡಕಲಾದ ಜಿಂಕೆಗಳಂತೆ
ಅದರ ನಾಯಕರೆಲ್ಲಾ
ಓಡಿಹೋದರು ಬೆಂಗೊಟ್ಟು
ಅಟ್ಟಿಬಂದವರಿಗೆಲ್ಲಾ !

7 ಜೆರುಸಲೇಮ್ ದಿಕ್ಕುಪಾಲಾಗಿ ಕಷ್ಟಪಡುವಾಗ
ನೆನೆಸಿಕೊಳ್ಳುತ್ತಾಳೆ ತನ್ನ ಪ್ರಾಚೀನ
ವೈಭವಗಳನ್ನೆಲ್ಲಾ.
ತನ್ನ ಜನತೆ ವೈರಿಗಳ ವಶವಾದಾಗ
ಆಕೆಗೆ ಸಿಗಲಿಲ್ಲ ಯಾರೊಬ್ಬರ ಬೆಂಬಲ.
ಆಕೆಯಾ ಹೀನಸ್ಥಿತಿ ನೋಡಿ
ವೈರಿಗಳು ಮಾಡಿದರು ಪರಿಹಾಸ್ಯ.

8 ಜೆರುಸಲೇಮ್ ಅಶುದ್ಧಳಾದಳು
ಪದೇ ಪದೇ ಪಾಪಮಾಡಿ.
ಹೊಗಳುತ್ತಿದ್ದವರೇ ತೆಗಳುವವರಾದರು
ಆಕೆಯ ನಗ್ನತೆಯನ್ನು ನೋಡಿ.
ಆಕೆಯೋ ನಿಟ್ಟುಸಿರಿಡುತ್ತಿರುವಳು
ಮುಖವನ್ನು ಮರೆಮಾಡಿ.

9 ಆಕೆಯ ನೆರಿಗೆಯೂ ಹೊಲಸಾಗಿ
ಮುಂದಿನ ಗತಿ ತೋಚದಂತಾಗಿ
ಸಂತೈಸುವವರೇ ಇಲ್ಲದವಳಾಗಿ
ಬಿದ್ದಿರುವಳಲ್ಲಾ ಈ ಭೀಕರ ಸ್ಥಿತಿಯಲ್ಲಿ !
"ಹೇ ಸರ್ವೇಶ್ವರಾ, ನೋಡು ನನ್ನ ಸಂಕಟವನು
ಹೆಚ್ಚಳ ಪಡುತ್ತಿರುವನಲ್ಲಾ ಶತ್ರುವಾದವನು"
ಎಂದು ಮೊರೆಯಿಡುತ್ತಾಳೆ ಕೂಗಿ.

10 ದೋಚಿಕೊಂಡನು ದ್ರೋಹಿ
ಆಕೆಯ ಆಸ್ತಿಯನ್ನು ಕೈಚಾಚಿ,
'ಸೇರಿಸಬಾರದು ಸಭೆಗೆ ಮ್ಲೇಚ್ಛರನ್ನು'
ಎಂಬುದು ದೇವನ ಆಣತಿ.
ಆದರಿಗೋ ಅಂಥವರೇ ಪವಿತ್ರಾಲಯ
ಪ್ರವೇಶಿಸುವ ದುರ್ಗತಿ !

11 ಅಡ್ಡಾಡುತ್ತಿರುವರು ಆಕೆಯ ಜನರು ಅನ್ನಕ್ಕಾಗಿ
ಮಾರುತ್ತಿರುವರು ಅಮೂಲ್ಯವಾದುದನ್ನೆ
ಆಹಾರಕ್ಕಾಗಿ.
"ಸರ್ವೇಶ್ವರಾ, ನೋಡು, ಕಟಾಕ್ಷಿಸು, ನನ್ನ
ತುಚ್ಛತೆಯನ್ನು"
ಎಂದು ಹೇಳಿ ಆಕೆ ಪ್ರಲಾಪಿಸುತ್ತಿರುವಳು.

12 "ಹಾದುಹೋಗುವವರೇ, ನಿಮಗಿಲ್ಲವೆ ನನ್ನ
ಚಿಂತೆ?
ಸರ್ವೇಶ್ವರ ಸಿಟ್ಟುಗೊಂಡು ನನಗಿತ್ತಿರುವನು
ಈ ವ್ಯಥೆ !
ಈ ಪರಿ ಸಂಕಟವನ್ನು ನೀವೆಲ್ಲಾದರು
ನೋಡಿದ್ದುಂಟೆ?"

13 "ಆಕಾಶದಿಂದ ಆತ ಸುರಿಸಿದ್ದಾನೆ ಅಗ್ನಿಯನ್ನೆ
ಅದು ದಹಿಸುತ್ತಿದೆ ನನ್ನೊಳಗಿನ ಎಲುಬುಗಳನ್ನೆ
ನನ್ನ ಕಾಲುಗಳಿಗೆ ಬಲೆಯೊಡ್ಡಿದ್ದಾನೆ
ಅದು ನನ್ನನ್ನೆಳೆಯುತ್ತಿದೆ ನೆಲಕ್ಕೆ

ಹಾಳುಬಿದ್ದ ನಾನು ಸದಾ ಬಳಲುತ್ತಿದ್ದೇನೆ.”

14 “ನನ್ನ ದ್ರೋಹಗಳನ್ನು ನನಗೆ ಬಿಗಿದಿದ್ದಾನೆ
ನೊಗದ ಕಣ್ಣುಗಳಂತೆ.
ಅವು ಹುರಿಗೊಂಡು, ಸುತ್ತಿಕೊಂಡು ಕುತ್ತಿಗೆಗೆ,
ನನ್ನ ಶಕ್ತಿಯನ್ನು ಹೀರುತ್ತಿವೆ.
ಸಿಕ್ಕಿಸಿದನಲ್ಲಾ ಸ್ವಾಮಿ, ನನ್ನಿಂದ
ಎದುರಿಸಲಾಗದಂಥವರ ಕೈಗೆ !

15 “ಸ್ವಾಮಿ ತೃಣೀಕರಿಸಿದನು ನನ್ನ ಶೂರರನ್ನೆಲ್ಲಾ
ನನ್ನ ಕಣ್ಮುಂದೆಯೇ.
ಸೈನ್ಯ ಸಮೂಹವನ್ನೆ ಬರಮಾಡಿದನು
ನನ್ನ ಯುವಕರನ್ನು ಸದೆಬಡಿಯಲೆಂದೇ.
ಯೆಹೂದಿಯೆಂಬ ಯುವತಿಯನ್ನು ತುಳಿಸಿದನು
ತೊಟ್ಟಿಯಲ್ಲಿ ದ್ರಾಕ್ಷಿ ತುಳಿವಂತೆ.

16 “ಗೋಳಾಡುತ್ತಿರುವೆನು ಈ ವಿಪತ್ತುಗಳಿಂದ;
ಸಂತೈಸಿ ಸುಧಾರಿಸುವವನು
ಬಲುದೂರವಿರುವುದರಿಂದ
ಹರಿಯುತ್ತಿದೆ ಕಂಬನಿ ಧಾರೆಧಾರೆಯಾಗಿ
ಕಣ್ಗಳಿಂದ;
ವೈರಿಗಳು ಗೆದ್ದು, ನನ್ನ ಕುವರರು
ಬಿದ್ದುಹೋಗಿರುವುದರಿಂದ.

17 ಸಿಯೋನ್ ನಗರಿ ಕೈಚಾಚಿ ಕೂಗಿಕೊಂಡರೂ
ಸಂತೈಸುವವರಾರೂ ಇಲ್ಲ.
ನೆರೆಹೊರೆಯವರೇ ಆಕೆಯ
ವಿರೋಧಿಗಳಾಗಲೆಂದು
ಸರ್ವೇಶ್ವರ ತೀರ್ಮಾನಿಸಿದ್ದಾನಲ್ಲಾ !
ಅವರ ನಡುವೆ ಹೊಲೆಯಾದ ಹೆಣ್ಣಿನಂತೆ
ಜೆರುಸಲೇಮ್ ಬಿದ್ದಿದ್ದಾಳಲ್ಲಾ !

18 “ಸರ್ವೇಶ್ವರನು ನ್ಯಾಯಸ್ವರೂಪಿ,
ನಾನಾದರೊ ಆತನ ಆಜ್ಞೆ ಮೀರಿದ ದ್ರೋಹಿ.
ಜನಾಂಗಗಳೇ, ನೀವೆಲ್ಲರು ಕಿವಿಗೊಡಿ, ನನ್ನ
ಸಂಕಟನೋಡಿ !
ನನ್ನ ಯುವಕ ಯುವತಿಯರು,
ಇಗೋ, ಸೆರೆಹೋಗಿರುವರು ನೋಡಿ.

19 “ನನ್ನ ಪ್ರಿಯರನ್ನು ಕರೆದೆ:
ಅವರೇ ಮೋಸಮಾಡಿದರೆನಗೆ.
ನನ್ನ ಯಾಜಕರೂ ಪ್ರಮುಖರೂ ಪಟ್ಟಣದಲ್ಲೇ
ಪ್ರಾಣತೆತ್ತರು,
ಉಸಿರನ್ನು ಉಳಿಸಿಕೊಳ್ಳಲು ಊಟವನ್ನು
ಹುಡುಕುತ್ತಿರಲು.

20 “ಹೇ, ಸರ್ವೇಶ್ವರಾ, ಕಟಾಕ್ಷಿಸು;
ನಾ ಇಕ್ಕಟ್ಟಿಗೆ ಸಿಕ್ಕಿಕೊಂಡಿರುವೆ.
ಕರುಳು ಕುದಿಯುತ್ತಿದೆ,
ಹೃದಯ ವಿಮುಖವಾಗಿದೆ
ನಾ ಗೈದ ದ್ರೋಹಕ್ಕೆ.
ಕತ್ತಿಗೆ ತುತ್ತಾಗುತ್ತಿರುವರು ಹೊರಗೆ
ಪ್ರಾಣಸಂಕಟಕ್ಕೆ ಗುರಿಯಾಗಿರುವೆ ಒಳಗೆ.

21 “ಸಾಂತ್ವನ ತರುವವರಾರೂ ಇಲ್ಲವಲ್ಲಾ
ನನಗೆ !
ನನ್ನ ನರಳಾಟದ ಸುದ್ದಿ ಮುಟ್ಟಿದೆ ವೈರಿಗಳ
ಕಿವಿಗೆ.
ನನಗಾದ ಕೇಡಿಗೆ ನೀನೇ ಕಾರಣನೆಂಬ ಸಂತಸ
ಶತ್ರುವಿಗೆ.
ನೀ ಮುಂತಿಳಿಸಿದ ಮೇರೆಗೆ ನನಗಾದ ಗತಿ
ಬರಲಿ ಅವರಿಗೆ.

22 “ಅವರು ಗೈದ ಕೆಡುಕೆಲ್ಲಾ ಬಟ್ಟಬಯಲಾಗಲಿ
ನಿನ್ನ ದೃಷ್ಟಿಗೆ.
ನನ್ನ ದ್ರೋಹಕ್ಕೆ ಪ್ರತಿಯಾಗಿ
ನನಗೆ ಮಾಡಿರುವಂತೆ ನೀ ಮಾಡು ಅವರಿಗೆ.
ನನ್ನ ನರಳಾಟ ಹೆಚ್ಚಿದೆ;
ನನ್ನ ಎದೆ ಕುಂದಿಹೋಗಿದೆ.”

## ಎರಡನೆಯ ಶೋಕಗೀತೆ

### ಜೆರುಸಲೇಮಿಗೆ ಸರ್ವೇಶ್ವರನೇ ಕೊಟ್ಟ ಶಿಕ್ಷೆ

**2** ಅಯ್ಯಯ್ಯೋ,
ಸ್ವಾಮಿಯೆ ಸಿಟ್ಟುಗೊಂಡಿರುವನಲ್ಲಾ !
ಸಿಯೋನ್ ಕುವರಿಗೆ ಕಾರ್ಮೋಡ ಕವಿದಂತೆ
ಮಾಡಿರುವನಲ್ಲಾ !
ಇಸ್ರಯೇಲಿನ ವೈಭವವನ್ನು ಆಗಸದಿಂದ
ನೆಲಕ್ಕೆಸೆದುಬಿಟ್ಟಿರುವನಲ್ಲಾ !

ಆ ಸಿಟ್ಟಿನ ದಿನದಂದು ತನ್ನ
ಪಾದಪೀಠವಾದ ದೇವಾಲಯವನ್ನೂ
ನೆನೆಯದೆ ಹೋದನಲ್ಲಾ !

2 ಸ್ವಾಮಿ ಯಕೋಬಿನ ನಿವಾಸಗಳನ್ನು
ನಾಶಪಡಿಸಿಹನು,
ರೌದ್ರದಿಂದ ಯೆಹೂದ ಕೋಟೆಗಳನ್ನು
ನೆಲಸಮವಾಗಿಸಿಹನು,
ರಾಜ್ಯವನ್ನೂ ಅದರ ಪಾಲಕರನ್ನೂ ನೀಚಸ್ಥಿತಿಗೆ
ಇಳಿಸಿಹನು.

3 ಶತ್ರು ಬಂದೆರಗಿದಾಗ ಸ್ವಾಮಿ ತನ್ನ ಶಕ್ತಿಯುತ
ಕೈಯನ್ನು ಹಿಂದೆಗೆದುಬಿಟ್ಟ,
ಇಸ್ರಯೇಲಿನ ಕೋಡನ್ನು ಕಡಿದು ಪುಡಿಪುಡಿ
ಮಾಡಿಬಿಟ್ಟ,
ಸುತ್ತುಗಟ್ಟಿ ನುಂಗುವ ಅಗ್ನಿಜ್ವಾಲೆಯಂತೆ
ಯಕೋಬನನ್ನು ದಹಿಸಿಬಿಟ್ಟ.

4 ಬಿಲ್ಲುಹಿಡಿದು ಬಂದ ಆತ ವೈರಿಯಂತೆ
ಬಲಗೈಯೆತ್ತಿ ನಿಂತ ವಿರೋಧಿಯಂತೆ,
ಸಂಹರಿಸಿಬಿಟ್ಟ ಸುಂದರ ಪ್ರಜೆಯೆಲ್ಲರನ್ನು
ರೋಷಾಗ್ನಿ ಸುರಿಸಿ ಭಸ್ಮಮಾಡಿದ ಸಿಯೋನ್
ಗುಡಾರವನ್ನು.

5 ಸ್ವಾಮಿಯೇ ಶತ್ರುವಾಗಿ ಕಬಳಿಸಿದ
ಇಸ್ರಯೇಲನ್ನು
ನಾಶಮಾಡಿದ ಅದರ ಅರಮನೆಗಳೆಲ್ಲವನ್ನು
ನೆಲಸಮಗೊಳಿಸಿದ ಅದರ
ಕೋಟೆಕೊತ್ತಲಗಳನ್ನು
ಯಥೇಚ್ಛವಾಗಿಸಿದ ಯೆಹೂದ ನಾಡಿನ
ಗೋಳಾಟವನ್ನು.

6 ತನ್ನ ಗರ್ಭಗುಡಿಯನ್ನೂ ಉತ್ಸವಸ್ಥಾನವನ್ನೂ
ಹಾಳುಮಾಡಿದ
ತೋಟದ ಗುಡಿಸಲನ್ನೋ ಎಂಬಂತೆ.
ಮಹೋತ್ಸವಗಳನ್ನೂ ಸಬ್ಬತ್‍ದಿನಗಳನ್ನೂ
ಆಳಿಸಿಬಿಟ್ಟ
ನೆನಪಿಗೂ ಬಾರದಂತೆ.
ರಾಜರನ್ನೂ ಯಾಜಕರನ್ನೂ ಸರ್ವೇಶ್ವರ
ಧಿಕ್ಕರಿಸಿದ

ಅತಿ ರೋಷಾವೇಷಗೊಂಡವನಂತೆ.

7 ಸ್ವಾಮಿ ತಿರಸ್ಕರಿಸಿಬಿಟ್ಟಿದ್ದಾನೆ ತನ್ನ
ಬಲಿಪೀಠವನ್ನೇ
ಅಸಹ್ಯಗೊಂಡು ತೊರೆದುಬಿಟ್ಟಿದ್ದಾನೆ ತನ್ನ
ಪವಿತ್ರಸ್ಥಾನವನ್ನೇ
ಸಿಯೋನ್ ಅರಮನೆಯ ಗೋಡೆಗಳನ್ನು
ಕೆಡವಲು ಬಿಟ್ಟಿದ್ದಾನೆ ಹಗೆಗಳನ್ನೇ.
ಹಬ್ಬಹರಿದಿನಗಳ ಜಯಘೋಷವೋ ಎಂಬಂತೆ
ಘೋಷಣೆ ಹಾಕುತ್ತಿದ್ದಾರಲ್ಲಾ ಶತ್ರುಗಳು
ಸರ್ವೇಶ್ವರನ ಮಂದಿರದಲ್ಲೆ !

8 ಸಿಯೋನ್ ನಗರಿಯ ಕೋಟೆಯನ್ನು
ನಾಶಪಡಿಸಲೆಂದು
ಎಳೆದಿರುವನಲ್ಲಾ ಸರ್ವೇಶ್ವರ ಅಳತೆನೂಲನ್ನು !
ಹಾಳುಮಾಡುವ ತನ್ನ ಕೈಯನ್ನು ಹಿಂದೆಗೆಯದೆ
ಬಿರುಕುಗೊಳಿಸಿದ್ದಾನೆ ಪೌಳಿಗೋಡೆಯನ್ನೇ,
ಕೋಟೆಯನ್ನೇ.
ಅವುಗಳೆರಡೂ, ಕುಸಿದು ಬಿದ್ದುಹೋಗಿವೆ.

9 ಹೂತುಹೋಗಿವೆ ಸಿಯೋನ್ ಹೆಬ್ಬಾಗಿಲುಗಳು
ಚೂರುಚೂರಾಗಿ ಬಿದ್ದಿವೆ ಅದರ ಅಗುಳಿಗಳು.
ಅರಸರೂ ಪಾಲಕರೂ ಸೇರಿಹೋದರು
ಅನ್ಯಜನಾಂಗಗಳೊಳು.
ನಿಂತುಹೋಗಿವೆ ಧರ್ಮಶಾಸ್ತ್ರ ಬೋಧನೆಗಳು.
ಸರ್ವೇಶ್ವರನಿಂದ ಪ್ರವಾದಿಗಳಿಗೆ ಆಗುತ್ತಿದ್ದ
ದಿವ್ಯದರ್ಶನಗಳು.

10 ತಲೆಯಮೇಲೆ ದೂಳನ್ನು ತೂರಿಕೊಂಡು
ಗೋಣಿತಟ್ಟನ್ನು ಸೊಂಟಕ್ಕೆ ಸುತ್ತಿಕೊಂಡು
ಕುಕ್ಕರಿಸಿಹರು ಸಿಯೋನ್ ನಗರಿಯ ಪ್ರಮುಖರು
ತಲೆತಗ್ಗಿಸಿಹರು ಜೆರುಸಲೇಮಿನ
ಯುವತಿಯರು.

11 ಕಂಬನಿಗರೆದು ಇಂಗಿಹೋಗಿದೆ ಕಣ್ಣು
ಕುದಿಯುತ್ತಿದೆ ನನ್ನೊಳಗೆ ಕರುಳು !
ನನ್ನ ಜನತೆಯೆಂಬ ಯುವತಿ ಹಾಳಾಗಿ
ಮಕ್ಕಳು ಹಾದಿಬೀದಿಗಳಲ್ಲಿ ಮೂರ್ಛೆಹೋಗಿ
ನನ್ನ ಕರುಳು ಕರಗಿಹೋಗಿದೆ ನೀರಾಗಿ.

12 'ಅಮ್ಮಾ ತಿನ್ನಲಿಕ್ಕಿಲ್ಲವೆ? ಕುಡಿಯಲಿಕ್ಕಿಲ್ಲವೆ?'
ಎನ್ನುತ ಮಕ್ಕಳು ಮೂರ್ಛೆಗೊಂಡಿವೆ.
ಗಾಯಗೊಂಡವರಂತೆ ನಗರದ ಚೌಕಗಳೊಳು
ಪ್ರಾಣಬಿಡುತ್ತಿವೆಯಲ್ಲಾ ತಾಯಿಯ
ಎದೆಯಮೇಲೆ ಆ ಹಸುಳೆಗಳು.

13 ಎಲೌ ಜೆರುಸಲೇಮ್ ಯುವತಿಯೇ, ನಿನಗೆ
ಏನು ಹೇಳಲಿ?
ನಿನ್ನನ್ನು ಯಾವುದಕ್ಕೆ ಹೋಲಿಸಲಿ?
ಸಿಯೋನ್ ಕನ್ಯೆಯೇ, ನಿನ್ನನ್ನು ಹೇಗೆ ಸಂತೈಸಲಿ?
ಸಂತೈಸುವ ಸಾಮತಿಯನ್ನು ಎಲ್ಲಿಂದ ತರಲಿ?
ನಿನಗೊದಗಿರುವ ನಾಶ ಸಾಗರದಂತೆ ಅಪಾರ
ನಿನ್ನನ್ನು ಸ್ವಸ್ಥಗೊಳಿಸಲು ಯಾರಿಂದ ತಾನೆ
ಸಾಧ್ಯ?

14 ನಿನ್ನ ಪ್ರವಾದಿಗಳು ಕಂಡ ದರ್ಶನದಲ್ಲಿ
ಸಾರವಿಲ್ಲ, ಅರ್ಥವಿಲ್ಲ.
ನಿನ್ನ ದೋಷಗಳನ್ನು ಬೈಲಿಗೆಳೆಯಲು
ಅವರಿಂದಾಗಲಿಲ್ಲ.
ಈ ಕಾರಣ, ನಿನ್ನ ದುರವಸ್ಥೆಯನ್ನು
ತಡೆಗಟ್ಟಲಾಗಲಿಲ್ಲ.
ನಿನ್ನ ಬಗ್ಗೆ ಅವರು ನುಡಿದ ದೈವೋಕ್ತಿಗಳು
ವ್ಯರ್ಥವಾದುವು.
ನೀನು ಗಡಿಪಾರಾಗಿ ಹೋಗಲು ಅವು
ಆಸ್ಪದವಾದುವು.

15 ಹಾದು ಹೋಗುವವರೆಲ್ಲ ಕೈ ತಟ್ಟುತ್ತಾರಲ್ಲಾ
ನಿನ್ನನ್ನು ನೋಡಿ
ಜೆರುಸಲೇಮ್ ನಗರಿಯಾದ ನಿನ್ನನ್ನು ಗುರುತಿಸಿ !
"ಆಹಾ, ನೀನೇನೋ ಸರ್ವಾಂಗ ಸುಂದರಿ,
ವಿಶ್ವಾನಂದದಾಯಕಿ!"
ಎಂದು ಮೂದಲಿಸುತ್ತಾರಲ್ಲಾ ತಲೆಯಾಡಿಸಿ,
ಸಿಳ್ಳುಹಾಕಿ!

16 ನಿನ್ನನ್ನು ನೋಡಿ ಶತ್ರುಗಳೆಲ್ಲರು
ಕಟಕಟನೆ ಹಲ್ಲು ಕಡಿಯುತ್ತಾರಲ್ಲಾ
ಬಾಯಿಕಿಸಿದು !
"ಹಾ, ಆಕೆಯನ್ನು ಕಬಳಿಸಿಬಿಟ್ಟೆವು
ಈ ದಿನಕ್ಕಾಗಿಯೆ ನಾವು ಕಾದಿದ್ದೆವು
ಈಗ ಅದನ್ನು ಕಣ್ಣಾರೆ ಕಂಡೆವು"

ಎಂದು ಕೊಚ್ಚಿಕೊಳ್ಳುತ್ತಾರಲ್ಲಾ!

17 ಸರ್ವೇಶ್ವರ ಸಿದ್ಧಿಗೆ ತಂದಿದ್ದಾನೆ ತನ್ನ
ಸಂಕಲ್ಪವನ್ನು
ಈಡೇರಿಸಿದ್ದಾನೆ ಪುರಾತನ ಕಾಲದಲ್ಲಿ ತಾನು
ನುಡಿದುದನ್ನು.
ನಿನ್ನನ್ನು ಧ್ವಂಸಮಾಡಿದ್ದಾನೆ
ದಯೆದಾಕ್ಷಿಣ್ಯವಿಲ್ಲದೆ.
ಆನಂದ ತಂದಿದ್ದಾನೆ ವೈರಿಗಳಿಗೆ
ಕೋಡುಮೂಡಿಸಿದ್ದಾನೆ ವಿರೋಧಿಗಳಿಗೆ !

18 ನಿನ್ನ ಜನರು ಮೊರೆಯಿಡಲಿ
ಮನಃಪೂರ್ವಕವಾಗಿ
ಸಿಯೋನ್ ನಗರದ ಕೋಟೆಗೆ ಕೋಟೆಯೇ
ಕಣ್ಣೀರಿಡಲಿ.
ಹಗಲಿರುಳು ಕಂಬನಿ ಹರಿಯಲಿ ತೊರೆಯಂತೆ
ನಿಮ್ಮ ನೇತ್ರಗಳಿಂದ ಸುರಿಯಲಿ
ಒಂದೇ ಸಮನೆ.

19 ರಾತ್ರಿಯ ಒಂದೊಂದು ಜಾವದಲ್ಲೂ
ಎದ್ದುಗೋಳಾಡಿರಿ.
ನಿಮ್ಮ ಹೃದಯ ಕರಗಿ, ನೀರಾಗಿ ಸ್ವಾಮಿಯ
ಮುಂದೆ ಹರಿಯಲಿ.
ನಿಮ್ಮ ಮಕ್ಕಳ ಪ್ರಾಣವನ್ನು ಉಳಿಸಬೇಕೆಂದು
ಕೈ ಮುಗಿದು ಪ್ರಾರ್ಥನೆಮಾಡಿ.
ಹಸಿವಿನಿಂದ ಅವು ಮೂರ್ಛೆಹೋಗಿವೆ,
ಬೀದಿಯ ಮೂಲೆಮೂಲೆಗಳಲ್ಲಿ.

20 ಹೇ, ಸರ್ವೇಶ್ವರಾ ಕಟಾಕ್ಷಿಸು !
ಇಷ್ಟೆಲ್ಲಾ ನೀ ಮಾಡಿದ್ದು ಯಾರಿಗೆಂದು
ಯೋಚಿಸು !
ತಾಯಂದಿರು ತಿನ್ನಬೇಕೆ ತಾವು ಆರೈಕೆ ಮಾಡಿದ
ತಮ್ಮ ಕರುಳ ಕುಡಿಯನ್ನೇ?
ಹತರಾಗಬೇಕೆ ಯಾಜಕರೂ ಪ್ರವಾದಿಗಳೂ
ಸ್ವಾಮಿಯ ಪವಿತ್ರಾಲಯದಲ್ಲೆ?

21 ವಯಸ್ಕರೂ ವೃದ್ಧರೂ ಬಿದ್ದಿದ್ದಾರೆ
ಬೀದಿಗಳಲ್ಲೆ
ತರುಣತರುಣಿಯರು ತುತ್ತಾಗಿದ್ದಾರೆ
ಖಡ್ಗಗಳಿಗೆ.

ನಿನ್ನ ಪ್ರಕೋಪದ ದಿನದಂದು
ಹತಮಾಡಿದೆಯಲ್ಲಾ
ಅವರನ್ನು ಕನಿಕರಿಸದೆ !

22 ಸುತ್ತಮುತ್ತಲೂ ದಿಗಿಲುಹುಟ್ಟಿಸುವ
ನನ್ನ ಹಗೆಗಳನ್ನೆ
ಕರೆಸಿದೆಯಲ್ಲಾ ಹಬ್ಬಕ್ಕೋ ಎಂಬಂತೆ !
ಸರ್ವೇಶ್ವರನ ಪ್ರಕೋಪದ ದಿನದಂದು
ತಪ್ಪಿಸಿಕೊಳ್ಳಲಿಲ್ಲ ಯಾರೂ; ಉಳಿಯಲಿಲ್ಲ
ಯಾರೂ.
ಶತ್ರು ಸಂಹರಿಸಿಬಿಟ್ಟನಲ್ಲಾ
ನಾನು ಸಾಕಿ ಆರೈಕೆ ಮಾಡಿದವರನ್ನೂ !

## ಮೂರನೆಯ ಶೋಕಗೀತೆ

### ಶಿಕ್ಷೆ, ಪಶ್ಚಾತ್ತಾಪ ಮತ್ತು ನಿರೀಕ್ಷೆ

**3** ಸರ್ವೇಶ್ವರನ ಕೋಪವೆಂಬ
ಕೋಲಿನಿಂದಲೇ
ಪೆಟ್ಟುತಿಂದ ವ್ಯಕ್ತಿಯೆಂದರೆ ನಾನೇ.

2 ಆತ ನನ್ನನ್ನು ಕರೆದೊಯ್ದು
ಬೆಳಕಿನಲ್ಲಿ ಅಲ್ಲ, ಕತ್ತಲಲ್ಲೇ ನಡೆಸಿದ.

3 ಹೌದು ದಿನವಿಡೀ, ಪದೇ ಪದೇ
ಕೈಮಾಡುತ್ತಾ ಬಂದಿಹನು ನನ್ನ ಮೇಲೆ.

4 ಸವೆಸಿರುವನು ನನ್ನ ಮಾಂಸಚರ್ಮಗಳನ್ನು
ಮುರಿದಿರುವನು ನನ್ನ ಎಲುಬುಗಳನ್ನು.

5 ನನ್ನನ್ನು ಹಿಡಿದು ಬಂಧಿಸಿರುವನು ದಿಬ್ಬಗಳ
ಮಧ್ಯೆ
ಸುತ್ತುಗಟ್ಟಿರುವನು ಕಷ್ಟಸಂಕಟಗಳ ನಡುವೆ.

6 ಎಷ್ಟೋ ದಿನಗಳ ಹಿಂದೆ ಸತ್ತವರ ಜೊತೆಯಲ್ಲಿ
ನನ್ನನ್ನು ಇರಿಸಿದ್ದಾನೆ ಆ ಕಾರ್ಗತ್ತಲಲ್ಲಿ.

7 ನಾನು ಹೊರಗಡೆ ಹೋಗದಂತೆ
ಗೋಡೆಯೆಬ್ಬಿಸಿರುವನು,
ಭಾರವಾದ ಬೇಡಿಗಳನ್ನು ನನಗೆ
ತೊಡಿಸಿರುವನು.

8 ಎಷ್ಟೋ ಮೊರೆಯಿಟ್ಟು ಕೂಗಿಕೊಂಡೆ,
ಕಿವಿಗೊಡಲಿಲ್ಲ ಆತ ನನ್ನ ಮೊರೆಗೆ.

9 ನನ್ನ ದಾರಿಗೆ ಅಡ್ಡವಾಗಿ ನೆಟ್ಟಿರುವನು ಮೊನಚು
ಕಲ್ಲುಗಳನ್ನು,
ಡೊಂಕು ಡೊಂಕು ಮಾಡಿರುವನು ನನ್ನ
ಹಾದಿಯನ್ನು.

10 ನನಗಾಗಿ ಆತ ಹೊಂಚುಹಾಕುತ್ತಿರುವನು
ಕರಡಿಯಂತೆ
ಗುಹೆಯಲ್ಲಿ ಅಡಗಿಕೊಂಡಿರುವನು ಸಿಂಹದಂತೆ.

11 ಆತ ನನಗೆ ದಾರಿತಪ್ಪಿಸಿರುವನು
ತುಂಡರಿಸಿ ದಿಕ್ಕಿಲ್ಲದವನಂತೆ ಮಾಡಿರುವನು.

12 ತನ್ನ ಬಿಲ್ಲನ್ನು ಬಗ್ಗಿಸಿರುವನು
ಬಾಣಕ್ಕೆ ನನ್ನನ್ನು ಗುರಿಮಾಡಿಕೊಂಡಿರುವನು.

13 ತನ್ನ ಬತ್ತಳಿಕೆಯ ಅಂಬುಗಳಿಂದ
ಇರಿದಿದ್ದಾನೆ ನನ್ನ ಅಂತರಂಗವನ್ನು.

14 ಹಾಸ್ಯಾಸ್ಪದನಾದೆ ಸ್ವಜನರೆಲ್ಲರಿಗೆ
ಗುರಿಯಾದೆ ಅವರ ದಿನನಿತ್ಯದ ಗೇಲಿ
ಲಾವಣಿಗಳಿಗೆ.

15 ಆತ ನನಗೆ ಕಹಿ ಉಣ್ಣಿಸಿದ್ದಾನೆ ಹೊಟ್ಟೆ
ತುಂಬ
ನನ್ನನ್ನು ತಣಿಸಿದ್ದಾನೆ ವಿಷಪದಾರ್ಥಗಳಿಂದ.

16 ನನ್ನ ಹಲ್ಲು ಮುರಿದಿದ್ದಾನೆ ನುರುಜುಗಲ್ಲಿನಿಂದ
ನನ್ನನ್ನು ಮುಚ್ಚಿಬಿಟ್ಟಿದ್ದಾನೆ ಬೂದಿಯಿಂದ.

17 ಶಾಂತಿಸಮಾಧಾನಕ್ಕೆ ನಾನು ದೂರವಾದೆ
ಸುಖಸಂತೋಷವನ್ನು ಮರೆತುಹೋದೆ.

18 ನಾನು ಇಂತೆಂದುಕೊಂಡೆ:
"ಅಯ್ಯೋ, ನನ್ನ ಶಕ್ತಿಯೆಲ್ಲಾ ಹಾಳಾಯಿತು
ಸರ್ವೇಶ್ವರನಲ್ಲಿ ನಾನಿತ್ತ ನಿರೀಕ್ಷೆ
ವ್ಯರ್ಥವಾಯಿತು."

19 ನಾನು ಪಟ್ಟ ಕಷ್ಟದುಃಖವನ್ನು ಮನಸ್ಸಿಗೆ
ತಂದುಕೊಂಡಾಗ
ಆಗುತ್ತಿದೆ ನನಗೆ ಕಹಿಯಾದ ಅನುಭವ.

20 ಮನದಲ್ಲೆ ಇವುಗಳನ್ನು ನಿತ್ಯವೂ ನೆನೆದಾಗ
ನನ್ನೊಳಗೇ ಸೊರಗಿಹೋಗುತ್ತದೆ ನನ್ನ ಮನ.

21 ಇಂತಿರಲು ನಿನ್ನ ಕರುಣೆಯನ್ನು ನೆನಪಿಗೆ
ತಂದುಕೊಳ್ಳುತ್ತೇನೆ
ಅದರಿಂದಲೆ ನನಗೆ ನಂಬಿಕೆ–ನಿರೀಕ್ಷೆ
ಮರುಕಳಿಸುತ್ತದೆ.

22 ನಾವು ಉಳಿದಿರುವುದು ಸರ್ವೇಶ್ವರನ
ಕರುಣೆಯಿಂದ
ಆತನ ಕೃಪಾವರಗಳಿಗೆ ಕೊನೆಯೇ ಇಲ್ಲ.

23 ಹೊಸಹೊಸದಾಗಿ ಅವು ಒದಗುತ್ತವೆ
ದಿನದಿನವು
ಮಹತ್ತರವಾದುದು ಆತನ ಸತ್ಯಸಂಧತೆಯು.

24 "ನನ್ನ ಪಾಲಿನ ಸೊತ್ತು ಸರ್ವೇಶ್ವರನೇ,
ನಿರೀಕ್ಷಿಸುತ್ತಿರುವೆನು ನಾನು ಆತನನ್ನೇ"
ಇಂತೆಂದುಕೊಳ್ಳುತ್ತದೆ ನನ್ನ ಅಂತರಾತ್ಮ.

25 ಸರ್ವೇಶ್ವರ ಒಳ್ಳೆಯವನು ಆತನನ್ನು
ನಿರೀಕ್ಷಿಸುವವರಿಗೆ
ಆತನನ್ನು ಹರಸಿ ಹಂಬಲಿಸುವ ಜನರಿಗೆ.

26 ಸರ್ವೇಶ್ವರನು ನಮ್ಮನ್ನು ಉದ್ಧರಿಸುವನೆಂದು
ಎದುರುನೋಡುತ್ತಾ ತಾಳ್ಮೆಯಿಂದಿರುವುದು
ಒಳಿತು.

27 ಯೌವನದಿಂದಲೆ ನೊಗ ಹೊತ್ತರೆ
ಮಾನವನಿಗೆ ಅದು ಹಿತಕರ.

28 'ನನ್ನ ಮೇಲೆ ಇದನ್ನು ಹೇರಿಸಿದವನು
ಸರ್ವೇಶ್ವರನು
ಎಂದು ಏಕಾಕಿಯಾಗಿ ಕುಳಿತು ಮೌನದಿಂದಿರು.

29 ಮಣ್ಣುಮುಕ್ಕಬೇಕಾಗಿ ಬಂದರೂ

30 ಹೊಡೆಯುವವನಿಗೆ ಕೆನ್ನೆಕೊಡುವಾಗಲೂ
ನಿಂದೆ ಅವಮಾನದಿಂದ ತೃಪ್ತಿಪಡುವಾಗಲೂ.
ನಂಬಿಕೆಗೆ ಎಡೆಯಿರಲು ಸಾಧ್ಯ.

31 ನರಮಾನವನನ್ನು ಸ್ವಾಮಿ ಸದಾಕಾಲಕ್ಕೂ
ತೊರೆದುಬಿಡುವವನಲ್ಲ.

32 ಒಂದು ವೇಳೆ ದುಃಖಪಡಿಸಿದರೂ
ಕೃಪಾತಿಶಯದಿಂದ ಕನಿಕರಿಸಬಲ್ಲ.

33 ನರಮಾನವರನ್ನು ಹಿಂಸಿಸಿ ದುಃಖಪಡಿಸುವುದು
ಆತನಿಗೆ ಎಷ್ಟು ಮಾತ್ರಕ್ಕೂ ಇಷ್ಟವಿಲ್ಲ.

34 ಇಳೆಯ ಸೆರೆಯಾಳುಗಳನ್ನು
ತುಳಿದುಬಿಡುವುದನ್ನೂ

35 ಪರಾತ್ಪರನ ಸನ್ನಿಧಿಯಲ್ಲೇ ನ್ಯಾಯ
ತಪ್ಪಿಸುವುದನ್ನೂ

36 ಅನ್ಯಾಯವಾಗಿ ವ್ಯಾಜ್ಯತೀರಿಸುವುದನ್ನೂ
ಸ್ವಾಮಿ ಲಕ್ಷ್ಯಕ್ಕೆ ತಂದುಕೊಳ್ಳದೆ
ಇರುತ್ತಾನೆಯೇ?

37 ಸ್ವಾಮಿಯ ಅಪ್ಪಣೆಯಿಲ್ಲದೆ
ಯಾರ ಮಾತೂ ಸಾರ್ಥಕವಾಗದು.

38 ಒಳಿತು–ಕೇಡು ಸಂಭವಿಸುವುದು
ಪರಾತ್ಪರನ ಮಾತಿನಿಂದ ಅಲ್ಲವೆ?

39 ಜೀವಾತ್ಮನಾದ ಮಾನವನು
ತನ್ನ ಪಾಪದ ಶಿಕ್ಷೆಗಾಗಿ ಗೊಣಗುಟ್ಟುವುದೆಂತು?

40 ನಮ್ಮ ನಡತೆಯನ್ನು ಪರೀಕ್ಷಿಸಿ
ಪರಿಶೋಧಿಸೋಣ
ಸರ್ವೇಶ್ವರನ ಕಡೆಗೆ ತಿರುಗಿಕೊಳ್ಳೋಣ;

41 ಪರಲೋಕದಲ್ಲಿರುವ ದೇವರಕಡೆಗೆ ನಮ್ಮ
ಕರಗಳನ್ನೂ ಹೃನ್ಮನಗಳನ್ನೂ ಎತ್ತೋಣ;

42 “ನಾವು ಅವಿಧೇಯರಾಗಿ ಪಾಪಮಾಡಿದೆವು
ನೀನು ಕ್ಷಮಿಸಲಿಲ್ಲ ನಮ್ಮನ್ನು.

43 “ರೋಷಭರಿತನಾಗಿ ನೀನು ಬೆನ್ನಟ್ಟಿಬಂದೆ
ದಯೆದಾಕ್ಷಿಣ್ಯವಿಲ್ಲದೆ ನಮ್ಮನ್ನು ಹತಿಸಿದೆ.

44 ನಮ್ಮ ಪ್ರಾರ್ಥನೆ ನಿನಗೆ ಮುಟ್ಟಬಾರದೆಂದೆ
ಮೋಡಗಳ ಹಿಂದೆ ಮರೆಮಾಡಿಕೊಂಡೆ.

45 ಕಸವನ್ನಾಗಿಯೂ ಹೊಲಸನ್ನಾಗಿಯೂ
ನಮ್ಮನ್ನು ಎಸೆದುಬಿಟ್ಟೆ ರಾಷ್ಟ್ರಗಳ ನಡುವೆ.

46 “ಶತ್ರುಗಳೆಲ್ಲರು ನಮ್ಮನ್ನು ನೋಡಿ
ಬಾಯಿ ಕಿಸಿದಿದ್ದಾರೆ ನಮಗೆ ವಿರುದ್ಧವಾಗಿ.

47 ಹಳ್ಳಗುಂಡಿಗಳು, ಭಯಭೀತಿಗಳು,
ನಾಶವಿನಾಶಗಳು
ನಮ್ಮ ಪಾಲಿಗೆ ಕಟ್ಟಿಟ್ಟ ಬುತ್ತಿಗಳು.

48 ಸ್ವಜನರು ನಾಶವಾದ ಕಾರಣದಿಂದಾಗಿ
ಹರಿಯುತ್ತಿದೆ ನನ್ನ ಕಣ್ಣೀರು ತೊರೆಯಾಗಿ.

49 “ಸರ್ವೇಶ್ವರನು ಪರಲೋಕದಿಂದ ಕಟಾಕ್ಷಿಸಿ
ನೋಡುವವರೆಗೂ

50 ಹರಿಯುತ್ತಿರುವುದು ನಿರಂತರವಾಗಿ ನನ್ನ
ಕಣ್ಣೀರು.

51 ನಗರದ ಯುವತಿಯರ ದುರ್ಗತಿಯನ್ನು ನೋಡಿ
ಅಳುತ್ತಿರುವ ನನ್ನನ್ನು ಕಾಡುತ್ತಿದೆ ಕಣ್ಣೂರಿ.

52 “ಹಕ್ಕಿಯನ್ನು ಬೇಟೆಯಾಡುವವರೋ ಎಂಬಂತೆ
ನಿಷ್ಕಾರಣ ವೈರಿಗಳು ಬೆನ್ನಟ್ಟಿ ಓಡಿಬಂದರು
ನನ್ನ ಹಿಂದೆ.

53 ನನ್ನನ್ನು ಗುಳಿಯಲ್ಲಿಳಿಸಿ ಕಲ್ಲು ಮುಚ್ಚಿದರು
ನನ್ನ ಪ್ರಾಣ ತೆಗೆಯಲು ಪ್ರಯತ್ನಿಸಿದರು.

54 ಪ್ರವಾಹವು ನನ್ನನ್ನು ಮುಳುಗಿಸಿತು;
ಆಗ ಸತ್ತೆ ಎಂದುಕೊಂಡೆ ನಾನು.

55 “ಹೇ ಸರ್ವೇಶ್ವರಾ, ಆಳವಾದ ಗುಳಿಯಲ್ಲಿ
ನಾ ಕುಳಿತೆ
ನಿನ್ನ ಹೆಸರೆತ್ತಿ ನಾನು ಪ್ರಾರ್ಥನೆಮಾಡಿದೆ.

56 ನನ್ನ ನಿಟ್ಟುಸಿರಿಗೂ ಮೊರೆಗೂ
ಕಿವಿಮುಚ್ಚಿಕೊಳ್ಳಬೇಡ ಎಂದೆ
ಆಗ ನೀನು ನನ್ನ ಧ್ವನಿಯನ್ನು ಕೇಳಿದೆ.

57 ನಿನ್ನನ್ನು ಕೂಗಿಕೊಂಡಾಗ ಸಮೀಪಕ್ಕೆ ಬಂದೆ
“ಭಯಪಡಬೇಡ” ಎಂದು ಅಭಯನೀಡಿದೆ.

58 “ಸ್ವಾಮೀ, ನೀನೇ ನನ್ನ ಪರವಾಗಿ ವಾದಿಸಿದೆ
ನನ್ನ ಪ್ರಾಣವನ್ನು ಉಳಿಸಿದೆ.

59 ಸರ್ವೇಶ್ವರಾ, ನಿನಗೆ ತಿಳಿದಿದೆ ನನಗಾದ ಅನ್ಯಾಯ
ದೊರಕುವಂತೆ ಮಾಡು ನನಗೆ ನ್ಯಾಯ.

60 ನೀನೇ ನೋಡಿರುವೆ ವೈರಿಗಳು ನನ್ನ ವಿರುದ್ಧ
ಸಾಧಿಸಿದ ಹಗೆಯನ್ನು
ಅವರು ಕಲ್ಪಿಸಿಕೊಂಡ ಕುಯುಕ್ತಿಯನ್ನು.

61 “ಸರ್ವೇಶ್ವರಾ, ನಿನ್ನ ಕಿವಿಗೆ ಬಿದ್ದಿದೆ
ನನ್ನ ವೈರಿ ಕಲ್ಪಿಸಿದ ಕುಯುಕ್ತಿ.

62 ನನ್ನ ಹಾನಿಗಾಗಿ ನಿತ್ಯವೂ ಮಾಡುತ್ತಿರುವ
ನಿಂದೆ ಅವಮಾನ, ತಂತ್ರೋಪಾಯ.

63 ಇಗೋ ನೋಡು, ಅವರು ಕುಳಿತಾಗಲೂ, ನಿಂತಾಗಲೂ
ಹಾಸ್ಯ, ಲಾವಣಿಗಳಿಗೆ ಗುರಿಯಾಗಿರುವೆ ನಾನು.

64 “ಹೇ, ಸರ್ವೇಶ್ವರಾ, ಅವರ ದುಷ್ಕೃತ್ಯಗಳಿಗೆ
ತಕ್ಕ ಪ್ರತೀಕಾರ ನೀಡು ಅವರಿಗೆ.

65 ಅವರ ಮನಸ್ಸನ್ನು ಮಂಕುಮಾಡು
ಅವರಿಗೆ ನಿನ್ನ ಶಾಪ ತಗಲುವಂತೆ ಮಾಡು.

66 ಸಿಟ್ಟುಗೊಂಡು ಅವರನ್ನು ಹಿಂದಟ್ಟು
ನಿನ್ನ ಆಕಾಶದ ಕೆಳಗಿನಿಂದ ಅವರನ್ನು
ಅಳಿಸಿಹಾಕು”.

## ನಾಲ್ಕನೆಯ ಶೋಕಗೀತೆ
### ಪತನವಾದ ಜೆರುಸಲೇಮಿನ ಪರಿಸ್ಥಿತಿ

**4** ಅಕಟಕಟಾ! ಎಷ್ಟು ಮಸುಕಾಗಿದೆ ಬಂಗಾರ
ಎಷ್ಟು ಕಾಂತಿಹೀನವಾಗಿಬಿಟ್ಟಿವೆ
ಅಪ್ಪಟ ಚಿನ್ನ !
ಪವಿತ್ರಾಲಯದ ಕಲ್ಲುಗಳೂ ಬಿದ್ದಿವೆ
ಚೆಲ್ಲಾಪಿಲ್ಲಿಯಾಗಿ
ಬೀದಿಬೀದಿಗಳ ಬದಿಯಲ್ಲಿ
ರಾಶಿರಾಶಿಯಾಗಿ !

2 ಅಯ್ಯೋ, ಅಪರಂಜಿಯಂತೆ ಅಮೂಲ್ಯವಾಗಿದ್ದ
ಸಿಯೋನ್ ಪ್ರಜೆ
ಇಂದು ಬೇಡವೆಂದು ಬಿಸಾಡಿದ ಕುಂಬಾರನ
ಮಣ್ಣುಮಡಕೆ !
ಅಮೂಲ್ಯವಾಗಿದ್ದರು ಸಿಯೋನಿನ ಪ್ರಜೆಗಳು
ಅಪರಂಜಿಯಂತೆ
ಅಯ್ಯೋ ಈಗ ಅವರಾಗಿಹರು
ಕುಂಬಾರನೆ ಬಿಸಾಡಿದ ಮಡಕೆಯಂತೆ.

3 ಮರಿಗಳಿಗೆ ಮೊಲೆಕೊಟ್ಟು ಹಾಲುಣಿಸುತ್ತವೆ
ನರಿಗಳು
ನನ್ನ ಜನರು ಆಗಿಹರು
ಕಾಡಿನ ಉಷ್ಟ್ರಪಕ್ಷಿಯಂತೆ ಕ್ರೂರಿಗಳು.

4 ದಾಹದಿಂದ ಸೇದುಹೋಗಿದೆ ಮೊಲೆಗೂಸಿನ
ನಾಲಿಗೆ
ಅನ್ನವಿಕ್ಕುವರಾರೂ ಇಲ್ಲ, ಹಂಬಲಿಸುವ
ಆ ಹಸುಳೆಗಳಿಗೆ.

5 ಮೃಷ್ಟಾನ್ನ ಉಣ್ಣುತ್ತಿದ್ದವರು ದಿಕ್ಕೆಟ್ಟು
ಅಲೆಯುತ್ತಿರುವರು
ಚಿಕ್ಕಂದಿನಿಂದಲೆ ನಾರುಮಡಿಯನ್ನು
ತೊಡುತ್ತಿದ್ದವರು
ತಿಪ್ಪೆಗಳನ್ನು ಅಪ್ಪಿಕೊಳ್ಳುವ ಗತಿಗೆ
ಇಳಿದಿರುವರು.

6 ‘ಸೊದೋಮ್’ ಊರು ಹಾಳಾಯಿತು
ಕ್ಷಣಮಾತ್ರದಲ್ಲೆ
ಅದರ ಮೇಲೆ ಯಾರೂ ಕೈಮಾಡದೆಯೇ.

ಅದಕ್ಕಿಂತಲೂ ಹೆಚ್ಚಾಯಿತಲ್ಲಾ
ನನ್ನ ಜನರ ಅಧರ್ಮ !

7 ನನ್ನ ಜನತೆಯ ಮಹನೀಯರು
ಹಿಮಕ್ಕಿಂತ ಶುಭ್ರ, ಹಾಲಿಗಿಂತ ಬಿಳುಪು.
ಅವರ ದೇಹದ ಬಣ್ಣ ಹವಳವನ್ನು ಮೀರಿತ್ತು
ಅವರ ರೂಪ ಇಂದ್ರನೀಲ ಮಣಿಯಂತೆ
ಅಂದವಾಗಿತ್ತು.

8 ಈಗ ಅವರ ಮುಖ ಕಾರ್ಮೋಡಕ್ಕಿಂತ ಕಪ್ಪು
ಬೀದಿಗಳಲ್ಲಿ ನೋಡುತ್ತಿದ್ದವರಿಗೆ ಅವರ
ಗುರುತೂ ಸಿಗದು.
ಅವರ ಚರ್ಮ ಎಲುಬುಗಳಿಗೆ ಅಂಟಿಕೊಂಡಿದೆ
ಅದಕ್ಕೆ ಸುಕ್ಕು ಹಿಡಿದಿದೆ; ಒಣಗಿ
ಕಟ್ಟಿಗೆಯಾಗಿದೆ.

9 ಹಸಿವೆಯಿಂದ ಹತರಾದವರಿಗಿಂತ
ಖಡ್ಗದಿಂದ ಹತರಾದವರು ಲೇಸು.
ತುತ್ತಾದರು ಅವರು ಕ್ಷಾಮಕ್ಕೆ
ಕ್ಷಯಿಸಿಹೋದರು ನೆಲದ ಗೆಡ್ಡೆ ಗೆಣಸೂ ಸಿಗದೆ.

10 ಕರುಣಾಮಯಿಗಳಾದ ಹೆಂಗಳೆಯರು
ತಮ್ಮ ಕಂದಮ್ಮಗಳನ್ನು ಸ್ವಂತ ಕೈಯಿಂದ
ಬೇಯಿಸಿದರು.
ನನ್ನ ಜನರ ಪರಿವಿನಾಶದ ಕಾಲದೊಳು
ತಮ್ಮ ತಾಯಿಗಳಿಗೆ ತಿಂಡಿಯಾದರು
ಆ ಹಸುಳೆಗಳು.

11 ಸುರಿಸಿದ್ದಾನೆ ಸರ್ವೇಶ್ವರ ತನ್ನ
ರೋಷಾಗ್ನಿಯನ್ನು
ತೀರಿಸಿಕೊಂಡಿದ್ದಾನೆ ತನ್ನ ಉಗ್ರಕೋಪವನ್ನು.
ಆತ ಹೊತ್ತಿಸಿದ ಬೆಂಕಿಗೆ
ಸಿಯೋನಿನ ಅಸ್ತಿವಾರ ಆಹುತಿಯಾಗಿದೆ.

12 ವೈರಿಗಳೂ ವಿರೋಧಿಗಳೂ
ಜೆರುಸಲೇಮಿನ ಬಾಗಿಲೊಳಗೆ
ಕಾಲಿಡುವರೆಂದು
ವಿಶ್ವದ ರಾಜರಾಗಲಿ, ನಿವಾಸಿಗಳಾಗಲಿ
ನಂಬಿರಲಿಲ್ಲ ಯಾರೂ.

13 ನಗರದ ನಡುವೆಯೇ ಆದ ನೀತಿವಂತರ
ರಕ್ತಪಾತದಿಂದ
ಯಾಜಕರು, ಪ್ರವಾದಿಗಳು ಎಸಗಿದ ಈ
ಪಾಪದೋಷಗಳಿಂದ
ಬಂದೊದಗಿತು ಈ ಪರಿತಾಪವೆಲ್ಲ.

14 ಕುರುಡರಂತೆ ಬೀದಿಗಳಲ್ಲಿ ಅಲೆಯುತ್ತಿಹರು
ಆ ಯಾಜಕರು ಮತ್ತು ಪ್ರವಾದಿಗಳು.
ಅವರ ಬಟ್ಟೆಯನ್ನೂ ಯಾರೂ ಮುಟ್ಟರು
ಏಕೆಂದರೆ ರಕ್ತದಿಂದ ಅವರು
ಕಳಂಕಿತರಾಗಿಹರು.

15 ಅವರನ್ನು ನೋಡುವವರೂ
"ತೊಲಗಿರಿ, ನೀವು ಅಶುದ್ಧರು
ನಡೆಯಿರಿ, ನಡೆಯಿರಿ, ಮುಟ್ಟಬೇಡಿ"
ಎಂದು ಕೂಗುತ್ತಿರುವರು.
ಅವರು ಓಡಿ ಅನ್ಯನಾಡುಗಳಲ್ಲಿ
ಅಲೆಯುತ್ತಿರಲು
"ಇವರು ಇನ್ನು ಇಲ್ಲಿ ತಂಗಕೂಡದು"
ಎನ್ನುತಿಹರು ಅಲ್ಲಿನ ನಾಡಿಗರು.

16 ಸರ್ವೇಶ್ವರನ ದೃಷ್ಟಿ ಅವರನ್ನು ಚದರಿಸಿದೆ
ಇನ್ನು ಆತ ತೋರನು ಅವರಿಗೆ ಕರುಣೆ.
ಯಾಜಕರಾದರೂ ಅವರಿಗೆ ಮರ್ಯಾದೆ
ತಪ್ಪಿಹೋಗಿದೆ
ಹಿರಿಯರಾದರೂ ಅವರಿಗೆ ಆದರಣೆ ಇಲ್ಲದಿದೆ.

17 ಮಬ್ಬಾಯಿತು ಕಣ್ಣು ವ್ಯರ್ಥವಾಗಿ ನೆರವನ್ನು
ನಿರೀಕ್ಷಿಸುತ
ರಕ್ಷಿಸಲಾಗದ ರಾಷ್ಟ್ರಕ್ಕಾಗಿ ಕೋವರದಲ್ಲಿ
ಕಾದು ನೋಡುತ.

18 ಶತ್ರು ನಮ್ಮನ್ನು ಹೆಜ್ಜೆಹೆಜ್ಜೆಗೂ
ಹುಡುಕುತ್ತಿದ್ದುದರಿಂದ
ಹಾದಿಬೀದಿಗಳಲ್ಲಿ ಸಂಚಾರಮಾಡಲೂ
ಆಗುತ್ತಿರಲಿಲ್ಲ.
ನಮಗೆ ಕಾಲವು ತೀರಿತು, ಅಂತ್ಯವು
ಸಮೀಪಿಸಿತು;
ಹೌದು, ನಮ್ಮ ಅಂತ್ಯವು ಬಂದೇ ಬಿಟ್ಟಿತು !

19 ಹದ್ದುಗಳ ವೇಗದಿಂದ ಹಿಂದಟ್ಟಿಬಂದರು
ನಮ್ಮನ್ನು ಬೆನ್ನಟ್ಟಿ ಬೆಟ್ಟಗಳನ್ನೇರಿದರು
ಅರಣ್ಯಗಳಲ್ಲಿ ನಮಗಾಗಿ ಹೊಂಚುಹಾಕಿದರು.

20 ಯಾವನನ್ನು ಕುರಿತು ನಾವು:
"ನಮ್ಮ ಬಾಳಿನ ಉಸಿರು, ದೇವರಿಂದ
ಅಭಿಷಿಕ್ತನು,
ಇವನ ಆಶ್ರಯದಿಂದಲೆ ರಾಷ್ಟ್ರಗಳ ನಡುವೆ
ನಮಗೆ ಉಳಿವು"
ಎಂದುಕೊಂಡೆವೋ ಅಂಥವನೇ ಸಿಕ್ಕಿಬಿದ್ದಿದ್ದಾನೆ
ಹಗೆಗಳು ತೋಡಿದ ಗುಳಿಯೊಳಗೆ !

21 'ಊಚ' ಮತ್ತು 'ಎದೋಮ್'
ನಾರೀಮಣಿಗಳೇ,
ಸಂತೋಷಿಸಿ ಉಲ್ಲಾಸಿಸುತ್ತಿರುವಿರಿ ಅಲ್ಲವೇ?
ಆದರೆ ಖಂಡಿತ ಬರುವುದು ಕಹಿಪಾನದ ಪಾತ್ರೆ
ನಿಮ್ಮ ಪಾಲಿಗೆ
ಅಮಲೇರಿ ಬೆತ್ತಲೆಯಾಗುವ ಗತಿ
ಬಂದೇಬರುವುದು ನಿಮಗೆ !

22 'ಸಿಯೋನ್' ನಾರಿಮಣಿಯೇ,
ನಿನ್ನ ದೋಷದ ಫಲವನ್ನು ಅನುಭವಿಸಿ ಆಗಿದೆ.
ಸರ್ವೇಶ್ವರನು ಮತ್ತೆ ಒಯ್ಯನು ನಿನ್ನನ್ನು ಸೆರೆಗೆ.
'ಎದೋಮ್' ನಾರಿಮಣಿಯೇ,
ನಿನ್ನ ದೋಷದ ನಿಮಿತ್ತ ಸರ್ವೇಶ್ವರನು ನಿನ್ನನ್ನು
ದಂಡಿಸುವನು
ನಿನ್ನ ಪಾಪಾಕ್ರಮಗಳನ್ನು ಬಯಲಿಗೆ
ಎಳೆಯುವನು.

## ಐದನೆಯ ಶೋಕಗೀತೆ

### ದಯೆತೋರೆಂದು ಸರ್ವೇಶ್ವರನಲ್ಲಿ ಪ್ರಾರ್ಥನೆ

**5** 'ಹೇ, ಸರ್ವೇಶ್ವರಾ,
ನಮಗೊದಗಿರುವ ದುರ್ಗತಿಯನ್ನು
ನೆನೆಸಿಕೊ
ನಾವು ಸಹಿಸುತ್ತಿರುವ ನಿಂದೆ ಅವಮಾನಗಳನ್ನು
ಗಮನಕ್ಕೆ ತಂದುಕೋ.

2 ನಮ್ಮ ಆಸ್ತಿಪಾಸ್ತಿ ಪರರ ಪಾಲಗಿದೆ
ನಮ್ಮ ಮನೆಮಾರುಗಳು ಹೆರವರ ವಶದಲ್ಲಿವೆ.

3 ನಾವು ತಂದೆಯಿಲ್ಲದ ಅನಾಥರು
ನಮ್ಮ ತಾಯಿಗಳು ವಿಧವೆಯರು.

4 ನೀರು ನಮ್ಮದಾದರೂ ಕೊಂಡುಕೊಂಡು
ಕುಡಿಯುತ್ತಿದ್ದೇವೆ
ಸೌದೆ ಸ್ವಂತವಾದರೂ ಕ್ರಯಕ್ಕೆ
ತೆಗೆದುಕೊಳ್ಳುತ್ತಿದ್ದೇವೆ.

5 ಹಿಂದಟ್ಟಿ ಬಂದವರು ಹಿಡಿದರು ನಮ್ಮ ಕುತ್ತಿಗೆ
ಬಳಲಿ ಬೆಂಡಾಗಿದ್ದೇವೆ ವಿಶ್ರಾಂತಿಯಿಲ್ಲದೆ.

6 ಹೊಟ್ಟೆಪಾಡಿಗಾಗಿ ಕೈ ಒಡ್ಡಿದ್ದೇವೆ
ಈಜಿಪ್ಟರಿಗೆ, ಅಸ್ಸೀರಿಯರಿಗೆ.

7 ನಮ್ಮ ಪಿತೃಗಳು ಪಾಪಮಾಡಿ ಗತಿಸಿಹೋದರು
ಅವರ ದೋಷಫಲವನ್ನು ನಾವು
ಸವಿಯಬೇಕಾಗಿ ಬಂದಿತು.

8 ದಾಸರುಗಳೇ ನಮಗೆ ದಣಿಗಳಾದರು
ಅವರಿಂದ ನಮ್ಮನ್ನು ಬಿಡಿಸುವವರಾರೂ
ಇಲ್ಲವಾದರು !

9 ಪ್ರಾಣಾಪಾಯದಿಂದ, ಕಾಡಿನ ಕಟುಕರ
ಭಯದಿಂದ
ನಾವು ಪಡೆಯುತ್ತಿದ್ದೇವೆ ದವಸ ಧಾನ್ಯ.

10 ಒಲೆಯಂತೆ ಸುಡುತ್ತಿದೆ ನಮ್ಮ ಚರ್ಮ
ಕ್ಷಾಮಕಾಲದ ಭೀಕರ ಜ್ವರದ ನಿಮಿತ್ತ.

11 ಅತ್ಯಾಚಾರ ನಡೆದಿದೆ ಸಿಯೋನ್ ಸತಿಯರ ಮೇಲೆ
ಯೆಹೂದ ಊರುಗಳ ಯುವತಿಯರ ಮೇಲೆ !

12 ನಮ್ಮ ನಾಯಕರ ಕೈಗಳನ್ನು ನೇತುಹಾಕಿದ್ದಾರೆ ಗಲ್ಲಿಗೆ
ನಮ್ಮ ಹಿರಿಯರನ್ನು ಗುರಿಪಡಿಸಿದ್ದಾರೆ
ಮಾನಭಂಗಕ್ಕೆ.

13 ನಮ್ಮ ಯುವಕರಿಗೆ ಬೀಸುವ ಕಲ್ಲು ಹಿಡಿವ ಗತಿ
ನಮ್ಮ ಮಕ್ಕಳಿಗೆ ಸೌದೆ ಹೊತ್ತು ಮುಗ್ಗರಿಸುವ ಪರಿಸ್ಥಿತಿ.

14 ಮುದುಕರು ಇನ್ನು ಕೂರುತ್ತಿಲ್ಲ ಚಾವಡಿಗಳಲಿ
ಯುವಕರು ಇನ್ನು ಹಿಡಿಯುತ್ತಿಲ್ಲ
ವಾದ್ಯಗಳನ್ನು ಕೈಯಲ್ಲಿ.

15 ಸಂತೋಷವು ನಮ್ಮ ಹೃದಯದಿಂದ
ಮಾಯವಾಗಿದೆ
ನಮ್ಮ ನಾಟ್ಯನಲಿವು ದುಃಖಕರವಾಗಿ
ಮಾರ್ಪಟ್ಟಿದೆ.

16 ನಮ್ಮ ಕಿರೀಟ ಬಿದ್ದುಹೋಗಿದೆ ತಲೆಮೇಲಿಂದ
ಈ ಕೇಡೆಲ್ಲಾ ಬಂದೊದಗಿದೆ ನಮ್ಮ ಪಾಪದ ನಿಮಿತ್ತ.

17 ಈ ಕಾರಣ, ನಮ್ಮ ಹೃದಯ ಕುಂದಿದೆ
ಇದೇ ಕಾರಣ, ನಮ್ಮ ಕಣ್ಣು ಮೊಬ್ಬಾಗಿದೆ.

18 ಸಿಯೋನ್ ಶ್ರೀ ಪರ್ವತ ಹಾಳಾಯಿತು
ಅದು ಅಲೆದಾಡುವ ನರಿಗಳ ಬೀಡಾಯಿತು.

19 ಹೇ ಸರ್ವೇಶ್ವರಾ, ನಿನ್ನ ರಾಜ್ಯ ಚಿರಕಾಲ
ನಿನ್ನ ಸಿಂಹಾಸನ ತಲತಲಾಂತರಕ್ಕೂ ಸುಸ್ಥಿರ !

20 ನಮ್ಮನ್ನೇಕೆ ಮರೆತುಬಿಟ್ಟೆ ಇಷ್ಟುಕಾಲ
ನಮ್ಮನ್ನೇಕೆ ಕೈಬಿಟ್ಟೆ ಇಲ್ಲಿಯ ತನಕ?

21 ಹೇ ಸರ್ವೇಶ್ವರಾ, ನಮ್ಮ ಮೇಲೆ
ನೀ ಬಲು ಸಿಟ್ಟುಗೊಂಡಿರುವೆಯೋ?
ಬಹುಶಃ ನಮ್ಮನ್ನು ಸಂಪೂರ್ಣವಾಗಿ
ತ್ಯಜಿಸಿಬಿಟ್ಟಿರುವೆಯೋ?

22 ತಿರುಗಿಸು ನಮ್ಮನ್ನು ನಿನ್ನ ಕಡೆಗೆ
ತಿರುಗುವೆವು ನೀನು ತಿರುಗಿಸಿದ ಹಾಗೆ.
ಪ್ರಾಚೀನ ವೈಭವವನ್ನು ಮರಳಿ ದಯಪಾಲಿಸು ನಮಗೆ.